# ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ.ದ.ನ್ಯಾದಂ.ರವರ ನ್ಯಾಯಾಲಯ ಕೆ ಆರ್ ನಗರ.

**ಸಿ.ಸಿ.ನಂ.1488/2019**

ಪಿರ್ಯಾದಿ ಃ ಸರ್ಕಾರದ ಪರ ಕೆ.ಆರ್.ನಗರ ಪೋಲೀಸ್ ಠಾಣೆ

ಃ ವಿರುದ್ಧ ಃ

ಆರೋಪಿ ಃ ಮೂರ್ತಿ ಎಂ ಇ ಬಿನ್ ಈರಯ್ಯ,
40 ವರ್ಷ,
ವಾಸಃ ಕೆ ಎಸ್ ಆರ್ ಟಿ ಸಿ ಬಸ್ ಚಾಲಕರು,
ಬ್ಯಾಡ್ಜ್ ನಂ. 65,
ಮುದ್ದನಹಳ್ಳಿ ಗ್ರಾಮ, ಕೋಲ್ಟಿ ಕೆರೆ ಹೋಬಳಿ,
ದೊಡ್ಡಮಗ, ಹಾಸನ.

## ಆರೋಪಣೆ

ದಿನಾಂಕಃ 25.12.2017 ರಂದು ಬೆಳಿಗ್ಗೆ 09.45 ಗಂಟೆ ಸಮಯದಲ್ಲಿ ಕೆ.ಆರ್.ನಗರ ಪೋಲೀಸ್ ಠಾಣಾ ಸರಹದ್ದು, ಕೆ ಆರ್ ನಗರ ಟೌನ್ ಬಿ ಎಸ್ ಮಾದಪ್ಪ ವಿದ್ಯಾಸಂಸ್ಥೆಯ ಮುಂದೆ ಹಾದು ಹೋಗಿರುವ ಮೈಸೂರು-ಹಾಸನ ಮುಖ್ಯ ರಸ್ತೆಯಲ್ಲಿ ಚಾಸಾ1-ಮಹದೇವರವರು ಚಾಸಾ5-ಕೀರ್ತಿರವರನ್ನು ಆಟೋದಿಂದ ಇಳಿಸಿಕೊಂಡು ಮಾದಪ್ಪ ವಿದ್ಯಾ ಶಾಲೆಯ ಬಳಿ ರಸ್ತೆ ದಾಟುವಾಗ ಆರೋಪಿಯಾದ ನೀವು ಕೆ ಆರ್ ನಗರ ಟೌನ್ ಕಡೆಯಿಂದ ಹಾಸನ ಕಡೆಗೆ ವಾಹನ ಸಂಖ್ಯೆ ಕೆಎ-11-ಎಫ್-0216 ಕೆ ಎಸ್ ಆರ್ ಟಿ ಸಿ ಬಸ್ಸನ್ನು ಮಾನವ ಪ್ರಾಣಕ್ಕೆ ಹಾನಿಯಾಗುವ ರೀತಿಯಲ್ಲಿ ಅತಿವೇಗ ಮತ್ತು ಅಜಾಗರೂಕತೆಯಿಂದ ಚಲಾಯಿಸಿರುತ್ತೀರಿ. ಆ ಮೂಲಕ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ 279 ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರಿ ಎಂದು ಆರೋಪಣೆ ಹೊರಿಸಲಾಗಿದೆ.

ಎರಡನೆಯದಾಗಿ ಮೇಲೆ ಹೇಳಿದ ತಾರೀಖು, ಸಮಯ ಮತ್ತು ಸ್ಥಳದಲ್ಲಿ ಆರೋಪಿಯಾದ ನೀವು ವಾಹನ ಸಂಖ್ಯೆ ಕೆಎ-11-ಎಫ್-0216 ಕೆ ಎಸ್ ಆರ್ ಟಿ ಸಿ ಬಸ್ಸನ್ನು ಮಾನವ ಪ್ರಾಣಕ್ಕೆ ಹಾನಿಯಾಗುವ ರೀತಿಯಲ್ಲಿ ಅತಿವೇಗ ಮತ್ತು ಅಜಾಗರೂಕತೆಯಿಂದ

ಚಲಾಯಿಸಿಕೊಂಡು ಹೋಗಿ ಚಾಸಾ5 ರವರಿಗೆ ಡಿಕ್ಕಿ ಪಡಿಸಿದ ಪರಿಣಾಮ ಚಾಸಾ5 ರವರ ಕೆಳಗೆ ಬಿದ್ದು, ಸದರಿಯವರ ತಲೆ, ಮೈ ಕೈಗೆ ತೀವ್ರ ಸ್ವರೂಪದ ಗಾಯಗಳಾಗಿರುತ್ತದೆ. ಆ ಮೂಲಕ ಆರೋಪಿಯಾದ ನೀವು ಭಾರತ ದಂಡ ಸಂಹಿತೆ ಕಲಂ 338 ಅಡಿ ಶಿಕ್ಷಾರ್ಹವಾದ ಅಪರಾಧವನ್ನು ಎಸಗಿರುವಿರಿ ಎಂದು ಆರೋಪಣೆ ಹೊರಿಸಲಾಗಿದೆ.

ಆದ್ದರಿಂದ ನೀವು ಈ ನ್ಯಾಯಾಲಯದಲ್ಲಿ ವಿಚಾರಣೆಯನ್ನು ಎದುರಿಸಬೇಕೆಂದು ನಿರ್ದೇಶಿಸುತ್ತೇನೆ.

ಸಹಿ/-

ದಿನಾಂಕಃ **23.11.2021**

ಪವಿತ್ರ ಆರ್
ಪ್ರಧಾನ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ.ಗಳು, ಕೆ ಆರ್ ನಗರ.